ಸಿ.ಸಿ.ನಂ.**444/2024**

ಪಿ.ಡಬ್ಲ್ಯೂ.**2**

**ಸಾಕ್ಷಿಗೆ ದಿನಾಂಕ : 05-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ ಆರೋಪಿ ಪರವಾಗಿ**

1. ನಾನು 2005-06 ರಿಂದ ಬಾಂಡ್ ರೈಟರ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಲೈಸೆನ್ಸ ನಂ.14/2005-06. ಆ ರೀತಿ ನಿಮ್ಮ ಲೈಸೆನ್ಸ ನಂಬರನ್ನು ಮತ್ತು ಯಾವಾಗಿನಿಂದ ನೀವು ಬಾಂಡ್ ರೈಟರ ಆಗಿ ಕೆಲಸ ಮಾಡುತ್ತಿದ್ದೀರಿ ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ಪ್ರಕರಣವನ್ನು ರಂಜನಾ ಜೋಶಿಯವರು ದಾನೇಶ್ವರಿ ಜವಳಿ ಅವರ ವಿರುದ್ದ ಕೈಗಡ ಪತ್ರ ಬರೆದಿದ್ದು, ಅದಕ್ಕೆ ಸಾಕ್ಷಿ ನುಡಿಯಲು ಬಂದಿದ್ದೇನೆ.

ಪಿರ್ಯಾದಿದಾರಳು ನಿಮಗೆ ಹೇಗೆ ಪರಿಚಿತಳು ಎಂದರೆ ನಮ್ಮ ಗ್ರಾಹಕಳು ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಮತ್ತು ಸದರಿ ರಂಜನಾ ಜೋಶಿ ಇವರ ಮಧ್ಯದಲ್ಲಿ ನೀವು ಬಾಂಡ್ ರೈಟರ ಮತ್ತು ಅದಕ್ಕೆ ಸಂಬಂಧಿಸಿದಂತೆ ಅವರು ಗ್ರಾಹಕರಾಗಿದ್ದನ್ನು ಹೊರತುಪಡಿಸಿ ಬೇರೆ ಯಾವುದಾದರೂ ಹಣದ ವ್ಯವಹಾರ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅಂದಾಜು ಎಷ್ಟು ಬಾರಿ ನಿಮ್ಮ ಬಳಿ ಸದರಿ ರಂಜನಾ ಅವರು ಬಂದಿದ್ದಾರೆ ಎಂದರೆ ಸಾಕ್ಷಿಯು ಎಲ್ಲಾ ವ್ಯವಹಾರಕ್ಕೂ ನನ್ನ ಬಳಿ ಬರುತ್ತಿದ್ದು, ಎಷ್ಟು ಬಾರಿ ಎಂದು ಹೇಳಲು ಬರುವುದಿಲ್ಲ. ಪಿರ್ಯಾದಿದಾರಳು ಏನು ಕೆಲಸ ಮಾಡುತ್ತಾಳೆ ಎಂದರೆ ಬ್ಯೂಟಿಶಿಯನ್ ಎಂದು ನುಡಿಯುತ್ತಾರೆ. ಅವರ ಆದಾಯದ ಬಗ್ಗೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರಳು 10 ರಿಂದ 15 ಪ್ರಕರಣಗಳನ್ನು ಮುಧೋಳ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಎಲ್ಲಾ ಪ್ರಕರಣಗಳಲ್ಲಿ ತಾವೇ ಬಾಂಡ್ ರೈಟರ ಎಂದರೆ ಗ್ರಾಹಕಳಾದ ಕಾರಣ ಬರೆದಿರಬಹುದು ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಯಾರಾದಾರು ಗ್ರಾಹಕ ಬಂದರೆ ಅವರ ಸೂಚನೆಯಂತೆ ದಾಖಲಾತಿ ತಯಾರಿಸಿ ಅದನ್ನು ಓದಿ ಹೇಳಿ ನಿಮ್ಮ ಸಮಕ್ಷಮ ಸಹಿ ಪಡೆಯುತ್ತೀರಿ ಎಂದರೆ ಸರಿ. ನಿಪಿ-6 ರಲ್ಲಿ ಪಿರ್ಯಾದಿದಾರಳು ತನ್ನ ಉದ್ಯೋಗ ಮನೆಗೆಲಸ ಎಂದು ಬರೆಸಿದ್ದಾಳೆ ಎಂದರೆ ಬರೆಸಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-6 ದಾಖಲಾತಿಯನ್ನು ಸಾಕ್ಷಿಗೆ ಕೊಟ್ಟಿದ್ದು ಅದು ಸಾಮಾನ್ಯವಾಗಿ ಕೈಗಡ ಪತ್ರ ಇರುವಂತೆ ಇಲ್ಲ ಬೇರೆಯಾಗಿದೆ ಎಂದರೆ ಸರಿಯಲ್ಲ. ಮೊದಲು ಖಾಲಿ ಬಾಂಡ್ ಪೇಪರ ಮೇಲೆ ಸಹಿ ಪಡೆದು ಅದು ಸರಿಯಾಗಿ ಕೂಡುವಂತೆ ದಾಖಲಾತಿಯಲ್ಲಿ ಹೊಂದಾಣಿಕೆ ಮಾಡಿ ಪ್ರಿಂಟ್ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೈಗಡ ತೆಗೆದುಕೊಂಡವರ ಸಹಿ ಎಂದು ಇದಿದ್ದರ ಮೇಲೆ ಸಹಿ ಪಡೆಯುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸಾಮಾನ್ಯವಾಗಿ ಕೆಳಗಡೆ ಸಹಿ ಪಡೆಯುತ್ತೇವೆ ಎಂದು ಹೇಳುತ್ತಾರೆ. ಪಿರ್ಯಾದಿದಾರಳು ಬಹಳಷ್ಟು ಹೆಣ್ಣುಮಕ್ಕಳಿಗೆ ಬಡ್ಡಿಯ ಮೇಲೆ ಸಾಲ ನೀಡಿ ಬಡ್ಡಿ ಹಣ ಪ್ರತಿವಾರಕ್ಕೆ ವಸೂಲಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಯಶ್ರೀ ಬೆಳಗಲಿ ಮತ್ತು ಲಕ್ಕವ್ವ ಕೌಜಲಗಿ ಎನ್ನುವವರಿಗೆ ತಲಾ 2 ಲಕ್ಷ 50 ಸಾವಿರ ರೂಪಾಯಿ ಸಾಲ ನೀಡಿದ್ದಾರೆ ಎಂದು ತೋರಿಸುವಂತೆ ದಾಖಲಾತಿಯನ್ನು ನಿಮ್ಮ ಬಳಿ ಬರೆಸಿದ್ದಾರೆ ಎಂದರೆ ನಮ್ಮ ಗ್ರಾಹಕರಾಗಿದ್ದರಿಂದ ಬರೆಸಿರಬಹುದು ಎಂದು ಹೇಳುತ್ತಾರೆ. ಪಿರ್ಯಾದಿದಾರಳು ದುರ್ಗಾವಾಹಿನಿ ಎಂದು ಎನ್.ಜಿ.ಓ ನಡೆಸುತ್ತಿದ್ದು, ಅದರ ಸದಸ್ಯರಾದ ಮಹಿಳೆಯರಿಗೆ ಹಣ ನೀಡಿ ಖಾಲಿ ಚೆಕ ಮೇಲೆ ಸಹಿ ಪಡೆದು ಖಾಲಿ ಬಾಂಡ್ ಪೇಪರ ಮೇಲೆ ಸಹ ಸಹಿ ಪಡೆಯುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ಎಲ್ಲಾ ಸಾಲದ ಮೊತ್ತ ಹಿಂದಿರುಗಿ ಬಂದ ನಂತರ ಹೆಚ್ಚಿನ ಮೊತ್ತವನ್ನು ಕಬಳಿಸುವ ಉದ್ದೇಶದಿಂದ ಖಾಲಿ ಚೆಕನ್ನು ಮತ್ತು ಖಾಲಿ ಬಾಂಡ್ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀವು ಮತ್ತು ಪಿರ್ಯಾದಿಯವರು ಸೇರಿ ಖಾಲಿ ಬಾಂಡ್ ಪೇಪರ ದುರುಪಯೋಗಪಡಿಸಿಕೊಂಡು ಹೆಣ್ಣುಮಕ್ಕಳಿಂದ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

2. ಈ ಪ್ರಕರಣದಲ್ಲಿ ಹಾಜರಪಡಿಸಿದ ನಿಪಿ-6 ಬಾಂಡ್ ಪೇಪರನ್ನು ಯಾರು ಯಾವತ್ತು ತಂದರು ಎಂದರೆ ಆರೋಪಿತಳು ದಿಃ31.07.2023 ರಂದು ತಂದಳು ಎಂದು ನುಡಿಯುತ್ತಾರೆ. 5 ಲಕ್ಷ 50 ಸಾವಿರ ರೂಪಾಯಿ ಕೈಗಡ ಸಾಲಕ್ಕೆ ಸಂಬಂಧಿಸಿದಂತೆ ವ್ಯವಹಾರವನ್ನು ಎಷ್ಟು ರೂಪಾಯಿಯ ಬಾಂಡ್ ಪೇಪರ ಮೇಲೆ ಬರೆಯುತ್ತೀರಿ ಎಂದರೆ ಎಲ್ಲಾ ಮೊತ್ತದ ಕೈಗಡ ಸಾಲವನ್ನು ರೂ.100/- ಬಾಂಡ್ ಪೇಪರ ಮೇಲೆ ಎಂದು ಸಾಕ್ಷಿ ಹೇಳುತ್ತಾರೆ. ದಿಃ31.07.2023 ರಂದು ಆರೋಪಿತಳು ಮತ್ತು ಪಿರ್ಯಾದಿದಾರರು, ಬಡಿಗೇರ ಎಂಬ ಸಾಕ್ಷಿದಾರಳು ಮತ್ತು ಮುಲಕಟ್ಟನಾಳ ಎಂಬ ಸಾಕ್ಷಿದಾರ ಬಂದಿದ್ದರು. ದಾಖಲಾತಿ ಬರೆಯಲು ಮಾಹಿತಿ ಯಾರು ನೀಡಿದರು ಎಂದರೆ ಆರೋಪಿತಳು ಎಂದು ಸಾಕ್ಷಿ ಹೇಳುತ್ತಾರೆ. ಬಾಂಡ್ ಪೇಪರ ತೆಗೆದುಕೊಂಡು ನಿಮ್ಮ ಬಳಿ ಬಂದು ದಾಖಲಾತಿ ತಯಾರಿಸಲು ಎಷ್ಟು ಸಮಯ ಬೇಕಾಯಿತು ಎಂದರೆ ಮಧ್ಯಾಹ್ನ 12 ರಿಂದ 12-30 ರವರೆಗೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ಮತ್ತು ಪಿರ್ಯಾದಿದಾರಳು ಶಾಮೀಲಾಗಿ 5 ಲಕ್ಷ 50 ಸಾವಿರ ಎಂದು ಸುಳ್ಳು ವಿಷಯವನ್ನು ಬಾಂಡ್ ಪೇಪರ ಮೇಲೆ ನಮೂದಿಸಿ ನಿಮಗೆ ಅನುಕೂಲವಾಗುವಂತೆ ಅದನ್ನು ದುರುಪಯೋಗಿಸುತ್ತಿದ್ದೀರಿ ಎಂದರೆ ಸರಿಯಲ್ಲ.

3. ಪಿರ್ಯಾದಿದಾರಳು ಈ ಪ್ರಕರಣದಲ್ಲಿ ತನ್ನ ಬ್ಯಾಂಕ ಖಾತಾ ಉತಾರೆ ಹಾಜರಪಡಿಸಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ದಿಃ01.06.2023 ರಿಂದ ದಿಃ31.03.2024 ವರೆಗಿನ ಖಾತಾ ಉತಾರೆಯಲ್ಲಿ ನಿಮ್ಮ ಮತ್ತು ಪಿರ್ಯಾದಿದಾರಳ ನಡುವೆ ಜಮಾ ಮಾಡುವುದು ಮತ್ತು ಹಣ ತೆಗೆಯುವುದು ಸೇರಿ ರೂ.2,03,520/- ರ ವ್ಯವಹಾರ ಆಗಿದೆ ಎಂದರೆ ಸರಿ. ಸಾಕ್ಷಿಯ ಸ್ವತಃ ಮುಂದುವರೆದು ನನ್ನ ವ್ಯವಸಾಯದ ಜಮೀನು ಇದ್ದು, ಅದನ್ನು ಪಿರ್ಯಾದಿದಾರಳು ಉಳಿಮೆ ಮಾಡುತ್ತಿದ್ದು, ಆ ಕಾರಣದಿಂದ ಹಣ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ ಇದೆ ಎಂದು ಹೇಳುತ್ತಾರೆ. ದಿಃ07.08.2023 ರಿಂದ ದಿಃ18.10.2023 ರವರೆಗೆ ಒಟ್ಟು ರೂ.5,39,700/-

ರೂಪಾಯಿಯ ವ್ಯವಹಾರ ಆಗಿದೆ ಎಂದರೆ ಸರಿ. ಸಾಕ್ಷಿಯ ಸ್ವತಃ ಮುಂದುವರೆದು ನನ್ನ ವ್ಯವಸಾಯದ ಜಮೀನು ಇದ್ದು, ಅದನ್ನು ಪಿರ್ಯಾದಿದಾರಳು ಉಳಿಮೆ ಮಾಡುತ್ತಿದ್ದು, ಆ ಕಾರಣದಿಂದ ಹಣ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ ಇದೆ ಎಂದು ಹೇಳುತ್ತಾರೆ. ದಿಃ23.10.2023 ರಿಂದ ದಿಃ28.02.2024 ರವರೆಗೆ ರೂ.3,04,191/- ಗಳ ವ್ಯವಹಾರ ಆಗಿದೆ ಎಂದೆರ ಸರಿ. ಸಾಕ್ಷಿಯ ಸ್ವತಃ ಮುಂದುವರೆದು ನನ್ನ ವ್ಯವಸಾಯದ ಜಮೀನು ಇದ್ದು, ಅದನ್ನು ಪಿರ್ಯಾದಿದಾರಳು ಉಳಿಮೆ ಮಾಡುತ್ತಿದ್ದು ಮತ್ತು 18 ಗುಂಟೆ ಆಸ್ತಿಯನ್ನು ನಾನು ಖರೀದಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ಸಹ ಹಣ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ ಇದೆ ಎಂದು ಹೇಳುತ್ತಾರೆ. ದಿಃ04.03.2024 ರಿಂದ ದಿಃ25.03.2024 ರ ನಡುವೆ ರೂ.89,100/- ವ್ಯವಹಾರ ಆಗಿದೆ ಎಂದರೆ ಸರಿ. ಸಾಕ್ಷಿಯ ಸ್ವತಃ ಮುಂದುವರೆದು ನನ್ನ ವ್ಯವಸಾಯದ ಜಮೀನು ಇದ್ದು, ಅದನ್ನು ಪಿರ್ಯಾದಿದಾರಳು ಉಳಿಮೆ ಮಾಡುತ್ತಿದ್ದು, ಆ ಕಾರಣದಿಂದ ಹಣ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ ಇದೆ ಎಂದು ಹೇಳುತ್ತಾರೆ. ಅದೇ ರೀತಿ ದಿಃ01.04.2024 ರಿಂದ ದಿಃ30.11.2024 ರ ನಡುವೆ ರೂ.2,82,360/- ವ್ಯವಹಾರ ಆಗಿದೆ ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಅದೇ ರೀತಿ ದಿಃ27.10.2024 ರಿಂದ ದಿಃ30.11.2024 ರ ಮಧ್ಯದಲ್ಲಿ ರೂ.68.000/- ಆಗಿದೆ ಎಂದರೆ ಆಗಿರಬಹುದು. ಸಾಕ್ಷಿಯ ಸ್ವತಃ ಮುಂದುವರೆದು ನನ್ನ ವ್ಯವಸಾಯದ ಜಮೀನು ಇದ್ದು, ಅದನ್ನು ಪಿರ್ಯಾದಿದಾರಳು ಉಳಿಮೆ ಮಾಡುತ್ತಿದ್ದು, ಆ ಕಾರಣದಿಂದ ಹಣ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ ಇದೆ ಎಂದು ಹೇಳುತ್ತಾರೆ.

4. ಆ ರೀತಿ ನಿಮ್ಮ ಮತ್ತೆ ನಡುವೆ ಪಿರ್ಯಾದಿದಾರಳ ನಡುವೆ ಹಲವಾರು ವ್ಯವಹಾರಗಳು ಇದ್ದವು ಎಂದು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. 2015 ರ ನಂತರ ನನ್ನ ಮತ್ತು ಪಿರ್ಯಾದಿದಾರಳ ನಡುವೆ ವ್ಯವಸಾಯದ ಜಮೀನಿಗೆ ಸಂಬಂಧಪಟ್ಟಂತೆ ವ್ಯವಹಾರ ಇದೆ. ಪಿತ್ರಾರ್ಜಿತ ಆಸ್ತಿ ಇದ್ದು, 1 ಎಕರೆ 20 ಗುಂಟೆ ಆಸ್ತಿ ಖರೀದಿಸಿದ್ದೇನೆ. ಯಾರ ಕಡೆಯಿಂದ ನೀವು ಮೇಲೆ ಹೇಳಿದಂತೆ 18 ಗುಂಟೆ ಆಸ್ತಿ ಖರೀದಿಸಿದಿರಿ ಎಂದರೆ ಯಳ್ಳೂರ ಅವರ ಕಡೆಯಿಂದ 3 ರಿಂದ 4 ತಿಂಗಳ ಖರೀದಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ಮತ್ತು ಪಿರ್ಯಾದಿದಾರಳು ಸೇರಿ ಹೆಣ್ಣುಮಕ್ಕಳಿಂದ ಹೆಚ್ಚಿನ ಬಡ್ಡಿ ಮೊತ್ತವನ್ನು ವಸೂಲಿ ಮಾಡುವ ಕೆಲಸ ಮಾಡುತ್ತಿದ್ದು, ಅದಕ್ಕೆ ಸಂಬಂಧಿಸಿದಂತೆ ನೀವು ಖೊಟ್ಟಿಯಾಗಿ ಬಾಂಡ್ ಪೇಪರ ತಯಾರಿಸಿ ಕೊಡುತ್ತಿದ್ದು, ಆದ್ದರಿಂದ ನಿಮ್ಮ ಮತ್ತು ಪಿರ್ಯಾದಿದಾರಳ ನಡುವೆ ಮೇಲೆ

ಹೇಳಿದಷ್ಟು ವ್ಯವಹಾರ ಇದೆ ಎಂದರೆ ಸರಿಯಲ್ಲ. ಪಿರ್ಯಾದಿದಾರಳು ಮಾಡುವ ಕಾನೂನು ಬಾಹಿರ ಕೆಲಸಗಳಿಗೆ ಬೆಂಬಲ ನೀಡುವ ಉದ್ದೇಶದಿಂದ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ನಿಮ್ಮ ಪ್ರಕಾರ ಆರೋಪಿತಳಿಗೆ ಪಿರ್ಯಾದಿದಾರಳು 5 ಲಕ್ಷ 50 ಸಾವಿರ ರೂಪಾಯಿಯನ್ನು ಎಲ್ಲಿ ನೀಡಿದಳು ಎಂದರೆ ನನ್ನ ಕಚೇರಿಯಲ್ಲಿ ಎಂದು ಹೇಳುತ್ತಾರೆ. ಸದರಿ ಹಣದ ಮುಖಬೆಲೆ ಹೇಳಬಹುದಾ ಎಂದರೆ ನಾನು ಬೇರೆ ಕೆಲಸದಲ್ಲಿ ನಿರತನಾಗಿದ್ದು, ಮುಖಬೆಲೆ ನೋಡಿಲ್ಲ, ಹಣ ಮುಟ್ಟಿದೆಯಾ ಎಂದು ವಿಚಾರಿಸಿದೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಿರ್ಯಾದಿದಾರಳು ಮತ್ತು ಆರೋಪಿತಳ ನಡುವೆ ಯಾವುದೇ ವ್ಯವಹಾರ ನಿಮ್ಮ ಕಚೇರಿಯಲ್ಲಿ ಆಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

ಸಿ.ಸಿ.ನಂ.**444/2024**

ಪಿ.ಡಬ್ಲ್ಯೂ.**3**

**ಸಾಕ್ಷಿಗೆ ದಿನಾಂಕ : 05-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ ಆರೋಪಿ ಪರವಾಗಿ**

1. ನನಗೆ 24 ವರ್ಷ ವಯಸ್ಸು. ಪ್ರಮಾಣ ಪತ್ರವನ್ನು ಓದಿ ಸಹಿ ಮಾಡಿದ್ದೇನೆ. ನಾನು ಕೆಸರಗೊಪ್ಪ ಗ್ರಾಮದವನು. ಪ್ರಮಾಣ ಪತ್ರದಲ್ಲಿ ನಿಮ್ಮ ಊರು ಮತ್ತು ವಯಸ್ಸು ಏನು ಬರೆಸಿದ್ದೀರಿ ಎಂದರೆ 24 ವರ್ಷ ವಯಸ್ಸು ಎಂದು ಬರೆಸಿದ್ದು, ಊರು - ಮುಧೋಳ ಎಂದು ಹೇಳುತ್ತಾರೆ. ನಾನು ವಿದ್ಯಾರ್ಥಿ ಆಗಿದ್ದು, ವ್ಯವಸಾಯ ಸಹ ಮಾಡುತ್ತೇನೆ. ಬಿ.ಕಾಂ ಪದವೀದರನಾಗಿದ್ದು ಎಂ.ಕಾಂ ಓದುತ್ತಿದ್ದೇನೆ. ನೀವು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಖಾಸಗಿ ಕೆಲಸ ಮಾಡುತ್ತಿದ್ದೆ

ಎಂದು ನಮೂದಿಸಿದ್ದೀರಿ ಎಂದರೆ ಚಾಲಕನಾಗಿ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾರೆ. ನೀವು ಶೇಖರ ಕುಳಲಿ ಅವರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಅವರ ತಮ್ಮ ಅಶೋಕ ಕುಳಲಿ ಅವರ ಮನೆಯಲ್ಲಿ ಇರುತ್ತಿದ್ದು, ಕಚೇರಿಯಲ್ಲಿ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ಅಶೋಕ ಕುಳಲಿ ಅವರು ಏನು ಕೆಲಸ ಮಾಡುತ್ತಾರೆ ಎಂದರೆ ದಸ್ತು ಬರಹಗಾರರು ಎಂದು ಹೇಳುತ್ತಾರೆ. ಅಶೋಕ ಕುಳಲಿ ಮತ್ತು ಚಂದ್ರಶೇಖರ ಕುಳಲಿ ಇವರು ಮುಧೋಳದಲ್ಲಿ ಬಾಂಡ್ ರೈಟರ ಎಂದರೆ ಸರಿ. ನಾನು 2 ವರ್ಷದನಾಗಿದ್ದಾಗಿನಿಂದ ಅಶೋಕ ಕುಳಲಿ ಮತ್ತು ಚಂದ್ರಶೇಖರ ಕುಳಲಿ ಅವರ ಪರಿಚಯ ಇದೆ. ಸದರಿ ಕುಳಲಿ ಅವರು ಏನಾದರೂ ದಾಖಲಾತಿ ತೆಗೆದುಕೊಂಡು ಬಾ ಎಂದು ಇತ್ಯಾದಿ ಕೆಲಸ ಹೇಳಿದರೆ ನೀವು ಮಾಡುತ್ತೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಾನೇಶ್ವರಿ ಜವಳಿ ಅವರ ಪರಿಚಯ ಹೇಗೆ ಇದೆ ಎಂದರೆ ಸುಮಿತ್ರಾ ಬಡಿಗೇರ ಅವರ ಮೂಲಕ ಪರಿಚಿತಳು ಎಂದು ಹೇಳುತ್ತಾರೆ. ರಂಜನಾ ಜೋಶಿರವರ ಪರಿಚಯ ಹೇಗೆ ಇದೆ ಎಂದರೆ ಸಾಕ್ಷಿಯು ಒಂದೇ ಪ್ರದೇಶದಲ್ಲಿ ವಾಸಿಸುತ್ತಿದ್ದರಿಂದ ಪರಿಚಯ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ದಾನೇಶ್ವರಿ ಜೋಶಿ ಅವರಿಗೆ ಏನು ಹಣದ ಅವಶ್ಯಕತೆ ಇತ್ತು ಎಂದು ಕೇಳಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆರೋಪಿತಳು ಮತ್ತು ಪಿರ್ಯಾದಿದಾರಳ ನಡುವೆ ಪ್ರೀತಿ ವಿಶ್ವಾಸ ಇತ್ತು ಮತ್ತು ಪಿರ್ಯಾದಿದಾರಳು ಆರೋಪಿತಳಿಗೆ ಹಣ ನೀಡಿದಳು ಎಂದು ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. ಪಿರ್ಯಾದಿದಾರಳು ಮತ್ತು ಆರೋಪಿತಳ ನಡುವೆ ಪರಿಚಯ ಹೇಗೆ ಇತ್ತು ಮತ್ತು ಎಷ್ಟು ವರ್ಷಗಳಿಂದ ಇತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವ್ಯವಹಾರ ಆಗುವಾಗ ನೀವು ಅಲ್ಲಿ ಇದ್ದು, ಏನು ಮಾತುಕತೆ ಆಯಿತು ಎಂದು ನೋಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಬಾಂಡ್ ಪೇಪರವನ್ನು ಯಾವ ದಿನಾಂಕದಂದು ಖರೀದಿ ಮಾಡಲಾಯಿತು ಮತ್ತು ಯಾವ ದಿನಾಂಕದಂದು ಬರೆಸಿದರು ಎಂದರೆ ದಿಃ31.07.2023 ರಂದು ಸಾಕ್ಷಿ ಹೇಳುತ್ತಾರೆ. ನಿಮಗೆ ಕುಳಲಿ ಅವರು ಒಯಿ ಬಾಂಡ್ ಪೇಪರ ತೆಗೆದುಕೊಂಡು ಬಾ ಎಂದು ಆ ದಿನ ಬೆಳಿಗ್ಗೆ ಹೇಳಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ನಿಮ್ಮ ಪ್ರಕಾರ ಸದರಿ ವ್ಯವಹಾರ ಆಯಿತು ಎಂದರೆ ಸಾಕ್ಷಿಯು ಮಧ್ಯಾಹ್ನ 12-30 ಗಂಟೆಗೆ ಹಣ ಕೊಡುವುದನ್ನು ನಾನು ನೋಡಿದೆ ಎಂದು ಹೇಳುತ್ತಾರೆ. ಯಾರು ಯಾರಿಗೆ ಹಣ ನೀಡಿದರು ಎಂದರೆ ಪಿರ್ಯಾದಿದಾರಳು ಆರೋಪಿತಳಿಗೆ ಎಂದು ಹೇಳುತ್ತಾರೆ. ಯಾವ ಮುಖಬೆಲೆಯ ಹಣ ಇತ್ತು ಎಂದರೆ ಸಾಕ್ಷಿಯು 500 ರೂಪಾಯಿ ಮುಖಬೆಲೆಯ ಹಣ ಇದ್ದು, ಎಷ್ಟು ಕಂತುಗಳು ಇದ್ದವು

ಎಂದು ನಾನು ನೋಡಿಲ್ಲ. ನಿಮ್ಮ ಪ್ರಕಾರ ದಾಖಲಾತಿ ಬರೆಯಲು ಯಾರು ಮಾಹಿತಿ ನೀಡಿದರು ಎಂದರೆ ಆರೋಪಿತಳು ಎಂದು ನುಡಿಯುತ್ತಾರೆ. ನೀವು ಆರೋಪಿತಳು, ಪಿರ್ಯಾದಿದಾರಳು ಮತ್ತು ಮತ್ತೊಬ್ಬ ಸಾಕ್ಷಿದಾರರು ಎಲ್ಲರೂ ಒಂದೇ ಬಾರಿಗೆ ಸಹಿ ಮಾಡಿದ್ದೀರಾ ಎಂದರೆ ನಾನು ಒಬ್ಬನೇ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನೀವು ಒಬ್ಬರೇ ಕೇವಲ ಸದರಿ ದಾಖಾಲತಿಯ ಮೇಲೆ ಸಹಿ ಮಾಡಿದ್ದೀರಾ ಎಂದರೆ ಆರೋಪಿತಳು ಹಣ ತೆಗೆದುಕೊಂಡಿದ್ದೆ ಸಹಿ ಮಾಡಲು ಹೇಳಿದ್ದು, ನಾನು ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಿಮ್ಮೊಂದಿಗೆ ಸಹಿ ಮಾಡಿದ ಇನ್ನೊಬ್ಬ ಸಾಕ್ಷಿದಾರರು ಯಾರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಸುಮಿತ್ರಾ ಬಡಿಗೇರ ಮತ್ತು ಈ ಪ್ರಕರಣದ ಆರೋಪಿತಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾತ್ರ ಸಹಿ ಮಾಡಿದ್ದೇನೆ. ಸುಮಿತ್ರಾ ಬಡಿಗೇರ ಅವರೊಂದಿಗೆ ನಿಮ್ಮ ಯಾವ ವ್ಯವಹಾರ ಇತ್ತು ಎಂದರೆ ನಾನು ಸುಮಿತ್ರಾ ಬಡಿಗೇರ ಅವರಿಗೆ ಸಾಲದ ರೂಪದಲ್ಲಿ ಹಣ ನೀಡಿದ್ದೆ ಎಂದು ಹೇಳುತ್ತಾರೆ. ನಾನು 4 ಲಕ್ಷ 50 ಸಾವಿರ ರೂಪಾಯಿಯನ್ನು ಸುಮಿತ್ರಾ ಬಡಿಗೇರ ಅವರಿಗೆ ನೀಡಿದ್ದೇನೆ. ಸದರಿ ದಾಖಲಾತಿ ಚಂದ್ರಶೇಖರ ಕುಳಲಿ ಅವರ ಸಮಕ್ಷಮ ಆಗಿದೆಯಾ ಎಂದರೆ ದಾಖಲಾತಿಯನ್ನು ಸುಮಿತ್ರಾ ಬಡಿಗೇರ ನೀಡಿದ್ದು, ಸೀಲ್ ಕುಳಲಿ ಅವರದ್ದು ಇದೆ.

2. ಸದರಿ ದಾಖಲಾತಿಯ ಮೇಲೆ ನೀವು ಸುಮಿತ್ರಾ ಬಡಿಗೇರ ಅವರ ಮೇಲೆ ನೀವು ಅಸಲು ದಾವಾ ಸಂಖ್ಯೆ 116/2023 ರಂತೆ ಮಾನ್ಯ ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೀರಿ ಎಂದರೆ ಸರಿ. ನಿಮ್ಮ ಆದಾಯದ ಮೂಲ ಯಾವುದು ಎಂದರೆ ಕೃಷಿ ಎಂದು ಹೇಳುತ್ತಾರೆ. ನಿಮ್ಮ ಜಮೀನಿನ ಸರ್ವೆ ನಂಬರ ಹೇಳಬಹುದಾ ಎಂದರೆ ಸರ್ವೆ ನಂಬರ ನೆನಪಿಲ್ಲ, ತಂದೆಯ ಹೆಸರಿನಲ್ಲಿ ಕೆಸರಗೊಪ್ಪ ಗ್ರಾಮದಲ್ಲಿ ಇದೆ. ಕಬ್ಬು ಮತ್ತು ಅರಿಶಿನ ಬೆಳೆಯುತ್ತೇವೆ ಎಂದು ಹೇಳುತ್ತಾರೆ. (ಪಿರ್ಯಾದಿದಾರ ಪರ ವಕೀಲರು ಸದರಿ ಪ್ರಶ್ನೆಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಆಕ್ಷೇಪಿಸಿದ್ದು, ಆರೋಪಿ ಪರ ವಕೀಲರು ಪಿರ್ಯಾದಿದಾರಳು, ದಸ್ತು ಬರಹಗಾರಳು ಮತ್ತು ಸಾಕ್ಷಿದಾರರು ಕೂಡಿ ಎಲ್ಲರಿಗೂ ತೊಂದರೆ ಕೊಡುತ್ತಿದ್ದಾರೆ ಎಂದು ಸದರಿ ಪ್ರಶ್ನೆ ಕೇಳಲಾಗಿದೆ ಎಂದು ಹೇಳಿದ್ದು, ಪ್ರಶ್ನೆ ಸಮಂಜಸ ಇದ್ದ ಕಾರಣ ಆಕ್ಷೇಪಣೆ ತಳ್ಳಿ ಹಾಕಿ ಪ್ರಶ್ನೋತ್ತರ ತೆಗೆದುಕೊಳ್ಳಲಾಯಿತು) ಉತಾರೆ ಹಾಜರಪಡಿಸುತ್ತೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸುಮಿತ್ರಾ ಬಡಿಗೇರ ಅವರು ರಂಜನಾ ಜೋಶಿ ಅವರ ಕಡೆಯಿಂದ 50 ಸಾವಿರ ಸಾಲ ಪಡೆದು ಸಂಘದ ಸದಸ್ಯಳು ಎಂದರೆ ನನಗೆ

ಗೊತ್ತಿಲ್ಲ. ಸದರಿ ರಂಜನಾ ಜೋಶಿಯವರಿಗೆ ನೀಡಬೇಕಾದ ಎಲ್ಲಾ ಹಣವನ್ನು ಸುಮಿತ್ರಾ ಬಡಿಗೇರ ಅವರು ನೀಡಿದ್ದರು ಸಹ ಸದರಿ ರಂಜನಾ ಜೋಶಿಯವರು ಮತ್ತು ದಸ್ತುಬರಹಗಾರರಾದ ಚಂದ್ರಶೇಖರ ಕುಳಲಿ ಅವರು ಹೆಚ್ಚಿನ ಮೊತ್ತ ಪಡೆಯುವ ಉದ್ದೇಶದಿಂದ ದಾಖಲಾತಿ ಸೃಷ್ಟಿಸಿ ನಿಮ್ಮ ಮೂಲಕ ಸದರಿ ದಾವೆ ಸಲ್ಲಿಸುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಮಗೆ ಹಣದ ಅವಶ್ಯಕತೆ ಇದ್ದಾಗ ಪಿರ್ಯಾದಿದಾರಳು ಮತ್ತು ಚಂದ್ರಶೇಖರ ಕುಳಲಿ ಅವರು ನಿಮಗೆ ಹಣ ನೀಡುತ್ತಾರೆ ಎಂದರೆ ಸರಿಯಲ್ಲ. ನೀವು ಚಂದ್ರಶೇಖರ ಕುಳಲಿ ಅವರ ಬಳಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು ಸಹ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿಗೆ ಸಹಿ ಮಾಡಿ, ಅದಕ್ಕೆ ಪೂರಕವಾಗಿ ಪಿರ್ಯಾದಿದಾರಳ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತಳು ಪಿರ್ಯಾದಿದಾರಳಿಂದ ಯಾವುದೇ ಹಣ ಪಡೆಯದೇ ಇದ್ದರೂ ಸಹ ಮತ್ತು ನಿಪಿ-6 ರಂತೆ ಬಾಂಡ್ ಪೇಪರ ಬರೆದುಕೊಡದೇ ಇದ್ದರೂ ಸಹ ಮತ್ತು ನಿಪಿ-1 ಚೆಕ್ಕನ್ನು ಅದಕ್ಕೆ ಸಂಬಂಧಿಸಿದಂತೆ ನೀಡದೇ ಇದ್ದರೂ ಸಹ ಪಿರ್ಯಾದಿದಾರಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ